ಸಾಕ್ಷಿಯ ಹೆಸರುಃ ಶ್ರೀಮತಿ ಗುಣವತಿ (1 ನೇ ವಾದಿ)

ದಿನಾಂಕಃ 06-07-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಸಾಕ್ಷಿಯು ತನ್ನ ಮುಖ್ಯ ವಿಚಾರಣೆಯ ಪ್ರತಿಜ್ಞಾಪತ್ರ ಸಲ್ಲಿಸಿದ್ದು ಅದರಲ್ಲಿ ಬರೆದ ವಿಷಯವೆಲ್ಲಾ ಸತ್ಯವಾಗಿರುತ್ತವೆ ಮತ್ತು ಅದರಲ್ಲಿರುವ ಸಹಿ ನನ್ನದೆಂದು ಪ್ರಮಾಣಿಸಿ ಹೇಳಿರುತ್ತಾರೆ.

**ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಟಿ ಜಿ ವಕೀಲರಿಂದಃ**

1) ನೋಟರೀಯವರಿಂದ ಮಾಡಿಸಿಕೊಂಡ ನಮ್ಮ ಕುಟುಂಬದ ವಂಶವೃಕ್ಷವನ್ನು ನಿಪಿ 1 ಎಂದು ಗುರುತಿಸಲಾಯಿತು.

2) ಕೆ ಆರ್ ನಗರ ಪುರಸಭೆಯವರು ನೀಡಿರುವ ನಮೂನೆ 3 ರ ರಿಜಿಸ್ಟರ್ ನ ಮೂರು ದೃಡೀಕೃತ ಪ್ರತಿಗಳನ್ನು ನಿಪಿ 2 ರಿಂದ 4 ಎಂದು,

3) ದಿಃ 11-06-2015 ರಂದು 1 ನೇ ಪ್ರತಿವಾದಿ 2 ನೇ ಪ್ರತಿವಾದಿಗೆ ಮಾಡಿರುವ ದಾನ ಪತ್ರದ ಆನ್ ಲೈನ್ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ರುಜುವಾತಿಗೆ ಒಳಪಟ್ಟು ನಿಪಿ 5 ಎಂದು ಗುರುತಿಸಲಾಯಿತು.

4) ದಿಃ 12-11-2009 ರಂದು ನಾಗಪ್ಪ ರವರ ಮಗ ಮೋಹನ್ ರವರಿಂದ 1 ನೇ ಪ್ರತಿವಾದಿ ಹೆಸರಿನಲ್ಲಿ ಮಾಡಿರುವ ಕ್ರಯ ಪತ್ರದ ಆನ್ ಲೈನ್ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ರುಜುವಾತಿಗೆ ಒಳಪಟ್ಟು ನಿಪಿ 6 ಎಂದು ಗುರುತಿಸಲಾಯಿತು.

5) ದಿಃ 21-12-2021 ರಂದು 1 ಮತ್ತು 2 ನೇ ಪ್ರತಿವಾದಿಯರು 5 ನೇ ಪ್ರತಿವಾದಿಗೆ ಮಾಡಿರುವ ಕ್ರಯ ಪತ್ರದ ಆನ್ ಲೈನ್ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ರುಜುವಾತಿಗೆ ಒಳಪಟ್ಟು ನಿಪಿ 7 ಎಂದು ಗುರುತಿಸಲಾಯಿತು.

6) ಸಂಕನಹಳ್ಳಿ ಗ್ರಾಮದ ದಾವಾ ಐಟಂ ನಂ. 3 ಕ್ಕೆ ಸಂಬಂಧಪಟ್ಟ ಸರ್ವೆ ನಂ. 7/3 ಎ ಕ್ಕೆ ಸಂಬಂಧಪಟ್ಟ ಎರಡು ಪಹಣಿ ಪತ್ರಿಕೆಯನ್ನು ನಿಪಿ 8 ಮತ್ತು 9 ಎಂದು ಗುರುತಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ನೀಡಿ ಮುಂದೂಡಲಾಯಿತು.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು,
ಕೆ ಆರ್ ನಗರ.